ಸಿ.ಸಿ. ನಂ. 140/2024 ಪಿ.ಡಬ್ಲೂ-1

ದಿನಾಂಕಃ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿಯ ತಂದೆಯ ಹೆಸರು ಸುಬ್ಬೇಗೌಡ. ಆರೋಪಿ ನನಗೆ ಪರಿಚಯ ಇಲ್ಲದ ಕಾರಣ ಆರೋಪಿಯ ನಿಖರವಾದ ವಯಸ್ಸು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ರಾಜೇಶ ಎಂಬುವರು ಆರೋಪಿಗೆ ಸೇರಿದ ನಿಶಾನೆ ಪಿ-1 ಚೆಕ್ಕನ್ನು ಭರ್ತಿ ಮಾಡಿ ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಯಲ್ಲಿ ಹಣವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯ ಕುಟುಂಬದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

2) ಪ್ರಭಾವತಿ ಎಂಬ ಗುತ್ತಿಗೆದಾರರು ನನಗೆ ಪರಿಚಯ ಇರುವುದಿಲ್ಲ. ಆರೋಪಿಯ ಹೆಸರಿನಲ್ಲಿ ಗುತ್ತಿಗೆದಾರರ ಪರವಾನಿಗೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ಸೇರಿದ ಚೆಕ್ಕನ್ನು ರಾಜೇಶ್ ರವರು ಕಾಮಗಾರಿ ಕೆಲಸದ ಭದ್ರತೆಗಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿಯ ಮೂಲಕ ರಾಜೇಶ್ ರವರು ಕಾಮಗಾರಿ ಕೆಲಸವನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯಲು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದೂರಿನ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ